Vol 6 Issue 10 April 2017 ISSN No :2231-5063

# International Multidisciplinary Research Journal

# *Golden Research Thoughts*

Chief Editor
Dr.Tukaram Narayan Shinde

Publisher
Mrs.Laxmi Ashok Yakkaldevi

Associate Editor
Dr.Rajani Dalvi

Honorary
Mr.Ashok Yakkaldevi

## Welcome to GRT

**RNI MAHMUL/2011/38595** **ISSN No.2231-5063**

Golden Research Thoughts Journal is a multidisciplinary research journal, published monthly in English, Hindi & Marathi Language. All research papers submitted to the journal will be double - blind peer reviewed referred by members of the editorial board.Readers will include investigator in universities, research institutes government and industry with research interest in the general subjects.

### Regional Editor

Dr. T. Manichander

### *International Advisory Board*

Kamani Perera
Regional Center For Strategic Studies, Sri Lanka

Janaki Sinnasamy
Librarian, University of Malaya

Romona Mihaila
Spiru Haret University, Romania

Delia Serbescu
Spiru Haret University, Bucharest, Romania

Anurag Misra
DBS College, Kanpur

Titus PopPhD, Partium Christian University, Oradea,Romania

Mohammad Hailat
Dept. of Mathematical Sciences, University of South Carolina Aiken

Abdullah Sabbagh
Engineering Studies, Sydney

Ecaterina Patrascu
Spiru Haret University, Bucharest

Loredana Bosca
Spiru Haret University, Romania

Fabricio Moraes de Almeida
Federal University of Rondonia, Brazil

George - Calin SERITAN
Faculty of Philosophy and Socio-Political Sciences Al. I. Cuza University, Iasi

Hasan Baktir
English Language and Literature Department, Kayseri

Ghayoor Abbas Chotana
Dept of Chemistry, Lahore University of Management Sciences[PK]

Anna Maria Constantinovici
AL. I. Cuza University, Romania

Ilie Pintea,
Spiru Haret University, Romania

Xiaohua Yang
PhD, USA

......More

### *Editorial Board*

Pratap Vyamktrao Naikwade
ASP College Devrukh,Ratnagiri,MS India

R. R. Patil
Head Geology Department Solapur University,Solapur

Rama Bhosale
Prin. and Jt. Director Higher Education, Panvel

Salve R. N.
Department of Sociology, Shivaji University,Kolhapur

Govind P. Shinde
Bharati Vidyapeeth School of Distance Education Center, Navi Mumbai

Chakane Sanjay Dnyaneshwar
Arts, Science & Commerce College, Indapur, Pune

Awadhesh Kumar Shirotriya
Secretary,Play India Play,Meerut(U.P.)

Iresh Swami
Ex - VC. Solapur University, Solapur

N.S. Dhaygude
Ex. Prin. Dayanand College, Solapur

Narendra Kadu
Jt. Director Higher Education, Pune

K. M. Bhandarkar
Praful Patel College of Education, Gondia

Sonal Singh
Vikram University, Ujjain

G. P. Patankar
S. D. M. Degree College, Honavar, Karnataka

Maj. S. Bakhtiar Choudhary
Director,Hyderabad AP India.

S.Parvathi Devi
Ph.D.-University of Allahabad

Sonal Singh,
Vikram University, Ujjain

Rajendra Shendge
Director, B.C.U.D. Solapur University, Solapur

R. R. Yalikar
Director Managment Institute, Solapur

Umesh Rajderkar
Head Humanities & Social Science YCMOU,Nashik

S. R. Pandya
Head Education Dept. Mumbai University, Mumbai

Alka Darshan Shrivastava
Shaskiya Snatkottar Mahavidyalaya, Dhar

Rahul Shriram Sudke
Devi Ahilya Vishwavidyalaya, Indore

S.KANNAN
Annamalai University,TN

Satish Kumar Kalhotra
Maulana Azad National Urdu University

**Address:-Ashok Yakkaldevi 258/34, Raviwar Peth, Solapur - 413 005 Maharashtra, India**
**Cell : 9595 359 435, Ph No: 02172372010 Email: ayisrj@yahoo.in Website: www.aygrt.isrj.org**

ISSN: 2231-5063 IMPACT FACTOR : 4.6052(UIF) VOLUME - 6 | ISSUE - 10 | APRIL - 2017

GRT GOLDEN RESEARCH THOUGHTS

# ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸುರಪುರ ಸಂಸ್ಥಾನದ ಕೊಡುಗೆ

**Smt. Shubha**
Assistant Professor , Department of History ,
Govt. First Grade College, Hospet Road, Koppal.



ರಾಷ್ಟ್ರೀಯ ಹೋರಾಟಕ್ಕೆ ಪ್ರೇರಣೆ ನೀಡಿದ 1857ರ ಘಟನೆಯನ್ನು, ಭಾರತೀಯರಿಗೆ, ಸ್ವಾತಂತ್ರ್ಯ ಪ್ರೇಮಿಗಳಿಗೆ, ಇತಿಹಾಸದ ವಿದ್ಯಾರ್ಥಿಗಳಿಗೆ ಈಗಿನ ಮತ್ತು ಮುಂದಿನ ಪೀಳಿಗೆಗೆ ಈ ಹೋರಾಟದ ಮಹತ್ವವನ್ನು ಪುನರ್ ನೆನಪಿಸಿ ಮುಂದಿನ ಅಧ್ಯಯನ ಸಂಶೋಧನೆಗಳಿಗೆ ಸ್ಫೂರ್ತಿಯಾಗಲು ಹೊಸ ದೃಷ್ಟಿಕೋನದಿಂದ, ಹೊಸ ಚಿಂತನೆಗೆ ಒಳಪಡಿಸಿ ಲಭ್ಯವಿರುವ ಆಧಾರಗಳಿಂದ ಪುನರ್‌ರಚಿಸುವದು ಅವಶ್ಯಕವಾಗಿದೆ. 1857ರ ಹೋರಾಟದ ಪ್ರಮುಖ ಸ್ಥಳಗಳು ಭಾಗವಹಿಸಿದ ನಾಯಕರು ಮತ್ತು ಹೋರಾಟದ ಸಂದರ್ಭಗಳ ಬಗ್ಗೆ ವಿಶ್ಲೇಷಿಸಿ ಹೋರಾಟಕ್ಕೆ ಹೊಸ ಆಯಾಮವನ್ನು ನೀಡುವ ಪ್ರಯತ್ನವನ್ನು ಮಾಡಲಾಗಿದೆ.

ಸ್ವಾತಂತ್ರ್ಯ ಎಂಬುದು ಭಾರತೀಯರಿಗೆ ಬ್ರಿಟಿಷರು ಉಚಿತವಾಗಿ ನೀಡಿದ ಬಳುವಳಿ ಅಲ್ಲವೆಂಬುದನ್ನು ಮುಂದಿನ ಪೀಳಿಗೆಗೆ ತಿಳಿಸಬೇಕಾಗಿದೆ. ಈ ದೃಷ್ಟಿಯಿಂದ ಸ್ವಾತಂತ್ರ್ಯಕ್ಕಾಗಿ ಹಗಲಿರುಳು ಹೋರಾಡಿ ತಮ್ಮ ಜೀವನವನ್ನೆ ಬಲಿಗೈದವರ ಸ್ಮರಣೆ ಅವಶ್ಯವಾಗಿದೆ. ಸ್ವಾತಂತ್ರ್ಯಗಳಿಸಲು ಬ್ರಿಟಿಷರ ವಿರುದ್ಧ ಹೋರಾಡಿ ಹುತಾತ್ಮರಾದವರ ಸಮಗ್ರವಾದ ಅಧ್ಯಯನ ನಡೆದಿರುವದಿಲ್ಲ. 1857ರ ದಂಗೆ ನಡೆದು 159ವರ್ಷಗಳಾದರೂ ಈ ಘಟ್ಟದಲ್ಲಿ ಈ ಘಟನೆ ಬಗ್ಗೆ ಮತ್ತಷ್ಟು ಅಧ್ಯಯನ ಮಾಡುವದು ಅವಶ್ಯಕತೆಯಿದೆ ಎಂದೆನಿಸುತ್ತದೆ. ಈ ದೃಷ್ಟಿಯಿಂದ ಸಂಸ್ಥಾನಗಳಲ್ಲಿ ಸಾಮ್ರಾಜ್ಯಶಾಹಿ ವಿರುದ್ಧ ಹೋರಾಡಿದ ಹೊರಾಟಗಾರರ ವಿವಿಧ ಮುಖಗಳನ್ನು ಪರಿಚಯಿಸುವದಕ್ಕೆ ಪ್ರಾಮುಖ್ಯತೆ ಕೊಡಲಾಗಿದೆ. ಭಾರತದಲ್ಲಿ ನಡೆದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಪ್ರಭಾವವನ್ನು ಕರ್ನಾಟಕದ 4 ಸ್ಥಳಗಳಲ್ಲಿ ಕಾಣಬಹುದು. ಅವುಗಳಲ್ಲಿ ಅತ್ಯಂತ ಪ್ರಮುಖವಾದದ್ದು ಸುರಪುರ ಸಂಸ್ಥಾನದ ದೊರೆಯಾದ ರಾಜಾ ನಾಲ್ವಡಿ ವೆಂಕಟಪ್ಪ ನಾಯಕನ ದಂಗೆಯಾಗಿದೆ.

ದಕ್ಷಿಣ ಭಾರತದಲ್ಲಿ ಸುರಪುರ ಒಂದು ವೈಶಿಷ್ಟ–ವೈವಿದ್ಯಪೂರ್ಣವಾದ ಸಂಸ್ಥಾನ. ಗೋಸಲ ವಂಶದ ಜಕ್ಕಪ್ಪ ದೇಸಾಯಿಯ ಪುತ್ರನಾದ ಗಡ್ಡಿಪಿಡ್ಡನಾಯಕನಿಂದ ಕ್ರಿ.ಶ 1636ರಲ್ಲಿ ವಾಗಿಣಗಿರಿಯನ್ನು ಸ್ಥಾಪಿಸಿ ಅಲ್ಲಿ ಸುರಪುರ ಸಂಸ್ಥಾನಕ್ಕೆ ಭದ್ರ ಬುನಾದಿ ಹಾಕಿದನು. ನಂತರ ಪೀತಾಂಬರ ಬಹಿರಿ ಪಿಡ್ಡನಾಯಕನ ಆಳ್ವಿಕೆ ಕಾಲಾವಧಿಯಲ್ಲಿ ಸುರಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಆರಂಭಿಸಿದನು. ಸುರಪುರ ಸಂಸ್ಥಾನದ ಅರಸರ ಕಾಲಾವಧಿ ಕ್ರಿ.ಶ 1636 ರಿಂದ ಕ್ರಿ.ಶ 1858. ಈ ಸಂಸ್ಥಾನವನ್ನು 12 ಜನ ಅರಸರು ಆಳ್ವಿಕೆ ಮಾಡಿದರು. ಇವರು ಆರಂಭದಲ್ಲಿ ವಿಜಯನಗರ ಸಾಮ್ರಾಜ್ಯದ ಅಧೀನದಲ್ಲಿದ್ದರು. ಆದರೆ ವಿಜಯನಗರ ಸಾಮ್ರಾಜ್ಯದ ಪತನಾನಂತರ ಇವರು ಕೃಷ್ಣಾ–ಭೀಮಾನದಿಗಳ ಸಂಗಮ ಸ್ಥಳವಾದ ಸಗರನಾಡಿನಲ್ಲಿ ಸ್ವತಂತ್ರ ಸಂಸ್ಥಾನವನ್ನು ಸ್ಥಾಪಿಸಿ ಆಳ್ವಿಕೆ ಆರಂಭಿಸಿದರು. ಎಲ್ಲ ಅರಸು ಮನೆತನಗಳಂತೆ ಸುರಪುರ ಸಂಸ್ಥಾನವು ಕೂಡಾ ಅನೇಕ ಏರಿಳಿತಗಳಿಗೆ ಒಳಗಾಗಿದ್ದರೂ ತನ್ನ ಆತ್ಮ ಗೌರವವನ್ನು ಇಂದಿಗೂ ಕಾಯ್ದುಕೊಂಡು ಬಂದಿರುವದು ಸಂತೋಷದ ವಿಷಯ. ತಮ್ಮ ಸಂಸ್ಥಾನದ ಉಳಿವು ಮತ್ತು ರಕ್ಷಣೆಗಾಗಿ ವೀರಾವೇಷದಿಂದ ಹೊರಾಡಿ ಸಂಸ್ಥಾನವನ್ನು ಸಂರಕ್ಷಿಸಿದ ವೀರರಾಗಿದ್ದಾರೆ.

ಹೀಗೆ ಸ್ಥಾಪನೆಗೊಂಡ ಸುರಪುರ ಸಂಸ್ಥಾನ ಸಂಸ್ಥಾಪಿತ ಅರಸರಿಂದ ಹಿಡಿದು ಕೃಷ್ಣಪ್ಪನಾಯಕರ ಆಡಳಿತಾವಧಿಯವರೆಗೂ ತಲೆ ಎತ್ತಿ ಮೆರೆದ ಸಂಸ್ಥಾನವಾಗಿದೆ. ಈ ಸಂಸ್ಥಾನವನ್ನಾಳಿದ ಅರಸರು ಕೈಗೊಂಡ ಸಾಹಸಗಳಿಗೆ ಮೆಚ್ಚುಗೆಯಾಗಿ ಬಿಜಾಪುರದ ಸುಲ್ತಾನರು ಮತ್ತು ದೆಹಲಿಯ ಸುಲ್ತಾನರಿಂದ ಅನೇಕ ಬಿರುದು–ಬಾವಲಿಗಳನ್ನು ಪಡೆದು ಗೌರವದ ಸ್ಥಾನವನ್ನು ಹೊಂದಿದ್ದರು. ಕ್ರಿ.ಶ 1843–58ರ ವರೆಗೆ ನಾಲ್ವಡಿ ವೆಂಕಟಪ್ಪನಾಯಕನ ಆಳ್ವಿಕೆ ಕಾಲವು ಸುರಪುರ ಇತಿಹಾಸದಲ್ಲಿ ಪ್ರಮುಖವೆನಿಸುತ್ತದೆ. ಕೃಷ್ಣಪ್ಪನಾಯಕನಿಗೆ ಬಹಳ ವರ್ಷಗಳವರೆಗೆ ಗಂಡು ಸಂತಾನವಾಗದಿದ್ದುದು ಎಲ್ಲರಲ್ಲೂ ಆತಂಕ ಉಂಟು ಮಾಡಿತ್ತು. ಬಹಳ ಕಾಲದ ನಂತರ ಮಹಾರಾಣಿ ಈಶ್ವರಮ್ಮನವರಿಗೆ 12.06.1834 ರಂದು ಗಂಡು ಮಗು ಜನಿಸಿತು. ಆ ಮಗುವೇ ವೆಂಕಟಪ್ಪ ನಾಯಕ. ಇವರ ಜನನ ಸುರಪುರ ಸಂಸ್ಥಾನದಲ್ಲಿ ಮಿಂಚಿನ ಸಂಚಲನವಾಗಿ ಎಲ್ಲೆಡೆ ಹಬ್ಬದ ವಾತಾವರಣ ನಿರ್ಮಾಣವಾಗಿತ್ತು.

VOLUME - 6 | ISSUE - 10 | APRIL - 2017

ಆದರೆ ಕೃಷ್ಣಪ್ಪನಾಯಕ ಮತ್ತು ಮಹಾರಾಣಿ ಈಶ್ವರಮ್ಮ ಹಾಗೂ ರಾಮಾಶಾಸ್ತ್ರಿಗಳ ಮುಖ ಮಾತ್ರ ಕಾಂತಿ ಹೀನವಾಗಿತ್ತು. ಇದಕ್ಕೆ ಪ್ರಮುಖ ಕಾರಣ ರಾಜಕುಮಾರ ವೆಂಕಟಪ್ಪ ನಾಯಕನ ಜನ್ಮ ಜಾತಕದ ಫಲ. ಮಗುವಿನ ಜನನ ಜಾತಕದ ಫಲ "ವೆಂಕಟಪ್ಪ ನಾಯಕ ಕೇವಲ ಸುರಪುರ ರಾಜವಂಶದ ವಂಶೋದ್ಧಾರಕನಷ್ಟೆ ಅಲ್ಲದೇ ಇತಿಹಾಸ ಪ್ರಸಿದ್ಧ ಪುರುಷನಾಗುತ್ತಾನೆ, ಆದರೆ ಜೋತಿಷ್ಯ ಶಾಸ್ತ್ರ ಹೇಳುವಂತೆ ವೆಂಕಟಪ್ಪ ನಾಯಕ 24 ವರ್ಷಗಳನ್ನು ಪೂರ್ಣಗೊಳಿಸುವದಿಲ್ಲ, ಈತ ಪಟ್ಟಕ್ಕೆ ಬಂದ ತನ್ನ 24 ವರ್ಷದಲ್ಲಿ ಸುರಪುರ ಸಂಸ್ಥಾನ ಪರಕೀಯರ ಪಾಲಾಗುತ್ತದೆ" ಎಂಬುದಾಗಿತ್ತು. ಮಗುವಿನ ಜನನದ ಸುದ್ದಿ ರಾಜದಂಪತಿಗಳಿಗೆ ಒಂದೆಡೆಗೆ ಸಂತಸವನ್ನು ತಂದಿದ್ದರೆ, ಇನ್ನೊಂದೆಡೆ ಇತನ ಆಳ್ವಿಕೆ ಕಾಲದಲ್ಲಿ ಸುರಪುರ ಸಂಸ್ಥಾನ ಮತ್ತು ವೆಂಕಟಪ್ಪ ನಾಯಕನಿಗೆ ಒದಗಬಹುದಾದ ಆಪತ್ತು ಚಿಂತೆಗೀಡು ಮಾಡಿತ್ತು. ಅಲ್ಲದೆ ಕೃಷ್ಣಪ್ಪನಾಯಕನಿಗೆ ಮೊದಲು ಗಂಡು ಸಂತಾನವಿಲ್ಲದ ಕಾರಣ ತನ್ನ ಸಹೋದರ ಪಿಡ್ಡನಾಯಕನ ಮಗನನ್ನು ಸಂಸ್ಥಾನದ ಮುಂದಿನ ವಾರಸುದಾರನೆಂದು ಘೋಷಣೆ ಮಾಡಿಬಿಟ್ಟಿದ್ದರು. ವೆಂಕಟಪ್ಪ ನಾಯಕನ ಜನನದ ನಂತರ ಪಿಡ್ಡನಾಯಕನ ಮುಂದಿನ ಸಾಧನೆ ಮತ್ತು ಒಳ ಸಂಚುಗಳಿಗೆ ವೆಂಕಟಪ್ಪ ನಾಯಕ ಅಡ್ಡಿಯಾದ್ದುದು ಸಹಜ. ಮೇಲಿನ ಎಲ್ಲಾ ಮಾನಸಿಕ ನಿಲುವುಗಳ ರಾಜಕುಮಾರ ವೆಂಕಟಪ್ಪನಾಯಕನ ವ್ಯಕ್ತಿತ್ವದ ಮೇಲೆ ಅಚ್ಚಳಿಯದೇ ಪರಿಣಾಮ ಬೀರಿದ್ದರಿಂದ ಆಡಳಿತಾವಧಿಯಲ್ಲಿ ಉತ್ತಮ ನಿರ್ಣಯ ಕೈಗೊಳ್ಳುವಲ್ಲಿ ವಿಫಲನಾದನು.

ಬಾಲ್ಯದಿಂದಲೇ ವೆಂಕಟಪ್ಪ ನಾಯಕ ರಾಜವೈಭವದಲ್ಲಿ ರಾಜ ಮನೆತನವರ ಪ್ರೀತಿಯ ಕುಡಿಯಾಗಿ ಬೆಳೆದನು. ರಾಮಾಶಾಸ್ತ್ರಿಯವರು ವೆಂಕಟಪ್ಪನಾಯಕನಿಗೆ ಧರ್ಮೋಪದೇಶ ಮಾಡಿದರೆ, ಭಾಸ್ಕರಯ್ಯನವರು ವೆಂಕಟಪ್ಪ ನಾಯಕರಿಗೆ ಗುರುವಾಗಿದ್ದರು. ಅಕ್ಷರ ವಿದ್ಯೆಯ ಜೊತೆಗೆ ನೀತಿಶಾಸ್ತ್ರ, ಅರ್ಥಶಾಸ್ತ್ರ, ರಾಜನೀತಿಶಾಸ್ತ್ರ, ಭಾಷಾಶಾಸ್ತ್ರ, ಕ್ಷಾತ್ರ ವಿದ್ಯೆ ಮೊದಲಾದ ವಿದ್ಯೆಗಳನ್ನು ಕಲಿತು ಸಕಲ ಶಾಸ್ತ್ರಗಳಲ್ಲಿ ಪಾಂಡಿತ್ಯವನ್ನು ಪಡೆದರು. ತೀಕ್ಷ್ಣ ಬುದ್ಧಿಯ, ಸೂಕ್ಷ್ಮ ಮನಸ್ಸಿನ ರಾಜಕುಮಾರ ಗುರು ಹಿರಿಯರಿಗೆ ವಿನಮ್ರವಾಗಿ, ಪ್ರಜೆಗಳಿಗೆ ದಯಾಪರನಾಗಿ ಬೆಳೆಯುತ್ತಾನೆ.

ರಾಜಕುಮಾರ ವೆಂಕಟಪ್ಪ ನಾಯಕನಿಗೆ ನಾಲ್ಕಾರು ವರ್ಷಗಳು ತುಂಬಿತ್ತಿದ್ದಂತೆ ಕೃಷ್ಣಪ್ಪ ನಾಯಕರು ರಾಜ್ಯಾಡಳಿತ, ಪ್ರಜಾಯೋಗಕ್ಷೇಮ ಹಾಗೂ ಅಭಿವೃದ್ಧಿ ಕಾರ್ಯಗಳಲ್ಲಿ ತೊರುತ್ತಿರುವ ನಿರಾಸಕ್ತಿ ಎಲ್ಲರಲ್ಲೂ ಆತಂಕವನ್ನುಂಟು ಮಾಡಿತು. ಮಗನು 24 ವರ್ಷಗಳಲ್ಲಿ ಮರಣ ಹೊಂದುತ್ತಾನೆ, ಸುರಪುರ ಸಂಸ್ಥಾನ ಪರಕಿಯರ ಪಾಲಾಗುತ್ತದೆ ಎಂಬ ಭವಿಷ್ಯವನ್ನು ಕುರಿತು ಚಿಂತಿಸುತ್ತಾ ಮರಣ ಹೊಂದಿದರು. ರಾಜಾಕುಮಾರ ವೆಂಕಟಪ್ಪ ನಾಯಕ ಚಿಕ್ಕವರಾಗಿದ್ದರಿಂದ ಸಂಸ್ಥಾನದ ರಾಜ್ಯಾಡಳಿತವನ್ನು ನಿರ್ವಹಿಸಿಕೊಂಡು ಹೋಗುವ ಜವಾಬ್ದಾರಿ ಈಶ್ವರಮ್ಮನವರದಾಗಿತ್ತು. ರಾಜಾ ಕೃಷ್ಣಪ್ಪ ನಾಯಕನ ಆಳ್ವಿಕೆಯ ಕಾಲಾವಧಿಯಲ್ಲಿ ಸಂಸ್ಥಾನ ಆರ್ಥಿಕ ದಿವಾಳಿಯತ್ತ ಸಾಗಿದಾಗ ಬ್ರಿಟಿಷರು ಕ್ಯಾಪ್ಟನ ಗ್ರೀಸ್ಲೆ ಎಂಬುವವನ್ನು ರಾಜ ಪ್ರತಿನಿಧಿಯನ್ನಾಗಿ ನೇಮಿಸಿ ಸುರಪುರ ಸಂಸ್ಥಾನವನ್ನು ಆರ್ಥಿಕ ಪ್ರಗತಿಯತ್ತ ಮುನ್ನೆಡೆಸಿಕೊಂಡು ಬರುವಲ್ಲಿ ಯಶಸ್ವಿಯಾದನು. ಆದರೆ ಕಾರಣಾಂತರಗಳಿಂದ ಕ್ಯಾಪ್ಟನ್ ಗ್ರೀಸ್ಲೆ ತನ್ನ ಹುದ್ದೆಗೆ ರಾಜೀನಾಮೆ ನೀಡಿ ಸ್ವದೇಶಕ್ಕೆ ತೆರಳಿದನು. ಇತನ ಸ್ಥಾನಕ್ಕೆ ಬ್ರಿಟಿಷ ಸರ್ಕಾರ ಕ್ಯಾಪ್ಟನ್ ಮೇಡೋಸ ಟೇಲರನನ್ನು ಬ್ರಿಟಿಷರ ರಾಜಪ್ರತಿನಿಧಿಯಾಗಿ ನೇಮಕ ಮಾಡಿತು.

ರಾಜಾ ವೆಂಕಟಪ್ಪ ನಾಯಕ ಜಾವಳ ತೆಗೆಯುವ ಸಮಾರಂಭ ನೇರವೇರಿಸಬೇಕಾಗಿತ್ತು. ಅದರ ಖರ್ಚಿಗಾಗಿ ಟೇಲರನು ರೆಸಿಡೆಂಟನ ಅಪ್ಪಣೆಯನ್ನು ಪಡೆದು ಸಂಸ್ಥಾನದ ಮರ್ಯಾದೆಗನುಸಾರವಾಗಿ ಎಲ್ಲ ಯೋಜನೆಯಾಗಿ ಊರ ಹೊರಗಿನ ಸಿದ್ದನ ತೋಟದಲ್ಲಿ ಜಾವಳ ತೆಗೆಯುವ ಕಾರ್ಯಕ್ರಮ ಅತ್ಯಂತ ವಿಜ್ರಂಭಣೆಯಿಂದ ನೆರವೇರಿಸಲಾಯಿತು. ಈಶ್ವರಮ್ಮನವರ ಆರೋಗ್ಯ ಸ್ಥಿತಿ ಹದಗೆಟ್ಟ ಕಾರಣ ವೆಂಕಟಪ್ಪ ನಾಯಕನನ್ನು ದಾಯಾದಿಗಳಿಂದ ಸಂರಕ್ಷಿಸಲು ಈಶ್ವರಮ್ಮನವರು ಮಗನನ್ನು ಟೇಲರನ ಸುಪರ್ದಿಗೆ ಒಪ್ಪಿಸುತ್ತಾರೆ. ನಂತರ ಈಶ್ವರಮ್ಮನು ಕೂಡ ಮರಣ ಹೊಂದುತ್ತಾಳೆ.

ಮೇಡೋಸ ಟೇಲರನ ಸಂರಕ್ಷಣೆಯಲ್ಲಿ ವೆಂಕಟಪ್ಪ ನಾಯಕ ಸಕಲ ವಿದ್ಯೆಗಳ ಜೊತೆಗೆ ಜನಮುಖಿಯಾದ ಅಭಿವೃದ್ಧಿ ಕಾರ್ಯಯೋಜನೆಗಳು ಮತ್ತು ರಾಜ ತಂತ್ರಗಳನ್ನು ಕಲಿತು ಬೆಳೆದು ದೊಡ್ಡವನಾದ ವೆಂಕಟಪ್ಪ ನಾಯಕ ಮನೋಸ್ಥಿತಿ ಮೆಚ್ಚುವಂತಹದು. ಅಲ್ಲದೆ ಟೇಲರನು ಪ್ರಬುದ್ಧ ವಯಸ್ಕನಾದ ವೆಂಕಟಪ್ಪ ನಾಯಕನಿಗೆ ರತ್ನಗಿರಿಯ ಅರಸರ ಮಗಳಾದ ರಂಗಮ್ಮಳೊಂದಿಗೆ ವಿವಾಹವನ್ನು ಮಾಡಿಸಿ ಸುರಪುರ ಸಂಸ್ಥಾನದ ಸಿಂಹಾಸನದಲ್ಲಿ ಕೂಡಿಸಿ ಸಂಸ್ಥಾನದ ರಾಜ್ಯಾಡಳಿತದ ಜವಾಬ್ದಾರಿಯನ್ನು ವೆಂಕಟಪ್ಪ ನಾಯಕನಿಗೆ ವಹಿಸಿ ಮೇಡೋಸ ಟೇಲರ ಸ್ವದೇಶಕ್ಕೆ ಹಿಂದಿರುಗಿದನು.

ರಾಜ್ಯಭಾರದ ಚುಕ್ಕಾಣಿಯನ್ನು ಹಿಡಿದ ವೆಂಕಟಪ್ಪ ನಾಯಕ ತನ್ನ ಗುರುವಾದ ರಾಮಾಶಾಸ್ತ್ರಿಗಳ ಮಾರ್ಗದರ್ಶನದಲ್ಲಿ ಅನೇಕ ಧಾರ್ಮಿಕ ಅಭಿವೃದ್ಧಿಯ ಕಾರ್ಯಗಳನ್ನು ಕೈಗೊಳ್ಳುವ ಮೂಲಕ ಸುರಪುರ ಸಂಸ್ಥಾನವನ್ನು ಧಾರ್ಮಿಕ ಪರಂಪರೆಯ ಸಾಂಸ್ಕೃತಿಕ ನಾಡನ್ನಾಗಿ ಪರಿವರ್ತಿಸಿದನು ಮಂತ್ರಿ ಕೇಶವರಾಯರ ಮಾರ್ಗದರ್ಶನದಂತೆ ಸಂಸ್ಥಾನದಲ್ಲಿ ನಾಣ್ಯಗಳನ್ನು ಟಂಕಿಸುವ ಜೊತೆಗೆ ಕೆರೆ–ಕಾಲುವೆ–ಬಾವಿಗಳನ್ನು ನಿರ್ಮಿಸಿ ಪ್ರಜಾಹಿತೈಷಿ ಸರ್ವತೋಮುಖ ಅಭಿವೃದ್ಧಿಗಾಗಿ ಅನೇಕ ಪ್ರಜಾ ಕಲ್ಯಾಣ ಕಾರ್ಯಗಳನ್ನು ಕೈಗೊಳ್ಳುವ ಜೊತೆಗೆ ಕರ ವಸೂಲಿ ಮತ್ತು ರಿಯಾಯಿತಿ ಸೌಲಭ್ಯಗಳು ಸುರಪುರ ಸಂಸ್ಥಾನವನ್ನು ಆರ್ಥಿಕ ಸಂಪತ್ಭರಿತ ಸಂಸ್ಥಾನವನ್ನಾಗಿಸಿತು. ಈ ಸಮಯದಲ್ಲಿ ಕೊತ್ತಪ್ಪ ನಾಯಕನ ನಾಯಕತ್ವದಲ್ಲಿ ಬೇಡ ಪಡೆಯನ್ನೊಳಗೊಂಡ ಸುರಪುರದ ಸೈನ್ಯ ವೈರಿಗಳ ಎದೆಯಲ್ಲಿ ನಡುಕ ಹುಟ್ಟಿಸುವಂತೆ ಮಾಡಿತು.

ಹೈದ್ರಾಬಾದಿನ ನಿಜಾಂ ಬ್ರಿಟಿಷರೊಂದಿಗೆ ಹೊಂದಾಣಿಕೆಯನ್ನು ಮಾಡಿಕೊಂಡು ಸುರಪುರದ ಸಂಪತ್ತನ್ನು ಕೊಳ್ಳೆ ಹೊಡೆಯಲು ಪ್ರಯತ್ನಿಸುತ್ತಾನೆ. ಪ್ರತಿ ವರ್ಷ ಖಂಡಣಿ ಹೆಚ್ಚಿಸುತ್ತಾ, ಇಲ್ಲ ಸಲ್ಲದ ನೆಪಮಾಡಿಕೊಂಡು ಸುಳ್ಳು ಲೆಕ್ಕ ಪತ್ರ ತೋರಿಸಿ ಆರ್ಥಿಕವಾಗಿ ಸಂಸ್ಥಾನವನ್ನು ಬಲ ಹೀನಗೊಳಿಸುವ ಪ್ರಯತ್ನ ಮಾಡುತ್ತಿದ. ಇದರ ಬಗ್ಗೆ ಕಂಪನಿ ಸರ್ಕಾರ ಗಮನಕ್ಕೆ ತಂದರೂ ಪ್ರಯೋಜನವಾಗಲಿಲ್ಲ. 1857ರಲ್ಲಿ ಭಾರತದಾದ್ಯಂತ ಬ್ರಿಟಿಷರ ದುರಾಡಳಿತ ವಿರುದ್ಧ ದೇಶಿಯ ಸಂಸ್ಥಾನಗಳ ಅರಸರು ದಂಗೆಯದ್ದರು ಇದನ್ನು ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಎನ್ನಬಹುದು. ಅದಕ್ಕೂ ಪೂರ್ವದಲ್ಲಿ ಅಂದರೆ 1857ರ ಪೂರ್ವದಲ್ಲಿ ಕರ್ನಾಟಕದ ವಿವಿಧ ಕಡೆಗಳಲ್ಲಿ ಬ್ರಿಟಿಷರ ದುರಾಡಳಿತದ ವಿರುದ್ಧ ಹೋರಾಟ ನಡೆದಿರುವುದನ್ನು ನೋಡಬಹುದು. ಮೊಟ್ಟ ಮೊದಲ ಬಾರಿಗೆ ಬ್ರಿಟಿಷರನ್ನು ಭಾರತದಿಂದ ಹೊಡೆದೊಡಿಸಬೇಕೆಂದು ಹೋರಾಡಿದವರಲ್ಲಿ ಹೈದರಲಿ, ಟಿಪ್ಪು ಸುಲ್ತಾನ ಪ್ರಥಮರಾಗಿದ್ದಾರೆ. ನಂತರ ಕಿತ್ತೂರು ಚನ್ನಮ್ಮ, ಕೊಪ್ಪಳದ ಜಮೀನ್ದಾರ ವೀರಪ್ಪ, ಬಾದಾಮಿ, ಬೀದರ, ಉದ್ಗೀರಗಳಲ್ಲಿ ದಂಗೆಗಳು ನಡೆದವು. ಆದರೆ ಈ ಎಲ್ಲ ದಂಗೆಗಳನ್ನು ಬ್ರಿಟಿಷ ಸರ್ಕಾರ ಯಶಸ್ವಿಯಾಗಿ ಸದೆಬಡಿಯಿತು. ಈ ಎಲ್ಲವುಗಳ ಸ್ಪಷ್ಟ ಚಿತ್ರಣ ವೆಂಕಟಪ್ಪ ನಾಯಕರಲ್ಲಿತ್ತು, ಹಾಗಾಗಿ ಬ್ರಿಟಿಷ್ ಕಂಪನಿ ಸರ್ಕಾರ ನಿರಂಕುಶ ಆಳ್ವಿಕೆಯ ವಿರುದ್ಧ ಬಂಡೇಳಲು ತನ್ನ ರಾಜ ಪರಿವಾರ ಮತ್ತು ಪ್ರಜಾ ಜನತೆಯೊಂದಿಗೆ ಸಮಾಲೋಚಿಸಿ ತೀರ್ಮಾನಿಸುತ್ತಾನೆ. ಯುದ್ಧೋಪಕರಣ ಮತ್ತು ಸೈನ್ಯದೊಂದಿಗೆ ಈ ಯುದ್ಧದಲ್ಲಿ ತಾವು ಕೈ ಜೋಡಿಸುವುದಾಗಿ ಜಂಬಗಿಯ ದೇಶಮುಖರು ಹೇಳಿ ಕಳುಹಿಸುತ್ತಾರೆ. ವೆಂಕಟಪ್ಪ ನಾಯಕನ ದಕ್ಷತೆ ಮತ್ತು ರಾಜ ತಂತ್ರಗಳನ್ನು ಕಂಡ ದಕ್ಷಿಣ ಭಾರತದ ಅನೇಕ ಸಂಸ್ಥಾನಿಕರು ಮತ್ತು ಮಾಂಡಲೀಕರು ಬ್ರಿಟಿಷರಿಂದ ಮುಂದೆ

VOLUME - 6 | ISSUE - 10 | APRIL - 2017

ತಮಗೊದಗುವ ಆಪತ್ತನ್ನು ನೆನೆದು ವೆಂಕಟಪ್ಪ ನಾಯಕನ ಸ್ನೇಹ ಬಯಸುತ್ತಾರೆ.

ಎಲ್ಲರನ್ನು ಒಂದುಗೂಡಿಸಿ ಬಲಿಷ್ಠವಾದ ಹೋರಾಟದಿಂದ ಬ್ರಿಟಿಷರನ್ನು ದೇಶ ಬಿಟ್ಟು ಓಡಿಸಬೇಕೆಂಬುದು ವೆಂಕಟಪ್ಪ ನಾಯಕನ ಬಹುದಿನದ ಸಂಕಲ್ಪವಾಗಿತ್ತು. ಇಲ್ಲದ ಕಾನೂನುಗಳ ನೆಪ ಮಾಡಿಕೊಂಡು ನರಗುಂದ, ಕಿತ್ತೂರು ಸಂಸ್ಥಾನಗಳನ್ನು ಬ್ರಿಟಿಷರು ನಾಶ ಮಾಡಿದ್ದು, ಹಲಗಲಿಯ ಬೇಡರನ್ನು ಛಿದ್ರಗೊಳಿಸಿರುವ ಬ್ರಿಟಿಷರ ಕುತಂತ್ರ ಬುದ್ದಿ ವೆಂಕಟಪ್ಪ ನಾಯಕನಲ್ಲಿ ಸೇಡಿನ ಭಾವನೆಯನ್ನಾಗಿಸಿತು. ಸಮಯೋಚಿತ ನಿರ್ಣಯವನ್ನು ತೆಗೆದುಕೊಂಡು ಸೈನ್ಯವನ್ನು ಬಲಿಷ್ಠಗೊಳಿಸಲು ರೋಹಿಲರನ್ನು, ಅರಬರನ್ನು ಮತ್ತು ವಿಶಿಷ್ಠ ಯುದ್ದ ತಂತ್ರವನ್ನು ಹೊಂದಿದ ಬೇಡರನ್ನು ತನ್ನ ಸೈನ್ಯಕ್ಕೆ ಸೇರಿಸಿಕೊಳ್ಳುತ್ತಾನೆ. ಈ ಎಲ್ಲ ಕಾರ್ಯಗಳನ್ನು ಪರಿಶೀಲಿಸಿದ ಮೀರಜ, ಕೊಲ್ಲಾಪುರ, ಜಮಖಂಡಿ, ಧಾರವಾಡ, ರಾಯಚೂರ, ಬಳ್ಳಾರಿ, ಆನೆಗೊಂದಿ, ಹುನಗುಂದ, ಜತ್, ಅಕ್ಕಲಕೋಟೆ, ಮುದೋಳ ಅರಸರು ವೆಂಕಟ್ಟಪ್ಪ ನಾಯಕನಿಗೆ ಬ್ರಿಟಿಷರ ವಿರುದ್ದ ಹೊರಾಟದ ಈ ಸ್ವಾತಂತ್ರ್ಯ ಸಂಗ್ರಾಮದ ಮುಂದಾಳತ್ವವನ್ನು ವಹಿಸಿಕೊಳ್ಳಬೇಕೆಂದು ಹೇಳಿದಾಗ ಅದಕ್ಕೆ ಸಮ್ಮಿತಿಸಿದನು. ಉತ್ತರ ಭಾರತದ ಪ್ರಮುಖ ನಾಯಕನಾಗಿದ್ದ ನಾನಾ ಸಾಹೇಬನೊಂದಿಗೆ ರಾಜಾ ವೆಂಕಟಪ್ಪನಾಯಕ ಉತ್ತಮ ಸಂಬಧ ಹೊಂದಿದ್ದ ಈ ಅವಧಿಯಲ್ಲಿ ದಕ್ಷಿಣ ಭಾರತದ ಈ ಸುರಪುರವು ಸ್ವಾತಂತ್ರ್ಯ ಸಂಗ್ರಾಮದ ಪ್ರಮುಖ ತಾಣವಾಗಿ ಮಾರ್ಪಟ್ಟಿತು.

ಕಂಪನಿ ಸರ್ಕಾರದ ವಿರುದ್ದ ಬಂಡೇಳುವ ದೇಶಾಭಿಮಾನದ ಕಿಚ್ಚು ವೆಂಕಟಪ್ಪ ನಾಯಕನ ರಾಷ್ಟ್ರ ಪ್ರೇಮದ ವ್ಯಕ್ತಿತ್ವವನ್ನು ಬಿಂಬಿಸುತ್ತದೆ. ಸಮಯ ನೋಡಿ ಸುರಪುರದ ಮೇಲೆ ಯುದ್ದ ಸಾರಲು ಕಂಪನಿ ಸರ್ಕಾರ ನಿರ್ಧರಿಸುತ್ತದೆ. 1858 ಫೇಬ್ರುವರಿ 7 ರಂದು ಸುರಪುರ ಸಂಸ್ಥಾನದ ಮೇಲೆ ಕಂಪನಿ ಸರ್ಕಾರ ಯುದ್ದ ಸಾರುವದಾಗಿ ತೀರ್ಮಾನಿಸಿ ಇದಕ್ಕು ಮೊದಲು ಸುರಪುರದ ಅರಸರು ಕಂಪನಿ ಸರ್ಕಾರದ ವಿರುದ್ದ ಬಂಡಾಯದಲ್ಲಿ ತೊಡಗಿದ್ದಾರೆಂಬ ಸತ್ಯವನ್ನು ತನಿಖೆ ಮಾಡಲು ಕ್ಯಾಪ್ಟನ್ ಕ್ಯಾಂಬೆಲ್ ನಿಯೋಜಿಸಿ ಆತನ ತನಿಖೆಗೆ ಸಹರಿಸುವಂತೆ ಸುರಪುರ ಸಂಸ್ಥಾನಕ್ಕೆ ಹೈದರಾಬಾದನಿಂದ ರೆಸಿಡೆಂಟ ಆದೇಶ ಪತ್ರ ಕಳುಹಿಸುತ್ತಾನೆ. ಇದನ್ನು ಸಹಿಸದೆ ವೆಂಕಟಪ್ಪ ನಾಯಕ ಕಂಪನಿ ಸರ್ಕಾರದ ಬಗ್ಗೆ ಕೆಂಡಾಮಂಡಲವಾದ ಇದನ್ನೆಲ್ಲ ಸಹಿಸಿಕೊಂಡು ವೆಂಕಟಪ್ಪ ನಾಯಕ ಕ್ಯಾಪ್ಟನ್ ಕ್ಯಾಂಬೆಲ್ ಬಂದಾಗ ಸಂಸ್ಥಾನದ ಸಂಪ್ರದಾಯದಂತೆ ಸ್ವಾಗತಿಸಿ ಭೇಟಿಯಾಗಿ ಮಾತನಾಡಿ ಬರುತ್ತಾನೆ. ನಂತರ ಕ್ಯಾಂಬೆಲ್ ಸುರಪುರ ಸಂಸ್ಥಾನದ ಅತೃಪ್ತ ದೇಶದ್ರೊಹಿ ಅಧಿಕಾರಿಗಳನ್ನು ಕರೆಯಿಸಿ ಅವರಿಗೆ ಹಣ, ಅಧಿಕಾರದ ಆಮಿಷ ನೀಡಿ ಅವರಿಂದ ವೆಂಕಟಪ್ಪ ನಾಯಕ ಮತ್ತು ಸಂಸ್ಥಾನದ ಗುಪ್ತ ವಿಚಾರಗಳನ್ನು ತಿಳಿದುಕೊಂಡು ಸ್ವದೇಶಕ್ಕೆ ಹೋಗಿ ಕಂಪನಿ ಸರ್ಕಾರಕ್ಕೆ ವರದಿ ಸಲ್ಲಿಸಿದ.

ಮೊದಲೇ ನಿರ್ಧಾರವಾದಂತೆ ಕಂಪನಿ ಸರ್ಕಾರ ಕ್ಯಾಂಬೆಲ್ ತನಿಖಾ ವರದಿ ಆಧರಿಸಿ ಸುರಪುರ ಸಂಸ್ಥಾನದ ಮೇಲೆ ಯುದ್ದ ಸಾರುತ್ತದೆ. ಕ್ಯಾಪ್ಟನ್ ವಿಂಡ್ ಹ್ಯಾಂನ ನೇತೃತ್ವದಲ್ಲಿ ಕಂಪನಿ ಸೈನ್ಯ ರುಕ್ಮಾಪುರದ ದಿಬ್ಬದ ಮೇಲೆ ಶಿಬಿರವನ್ನು ಹೂಡಿತು. ಹೆಚ್ಚಿನ ಪ್ರಮಾಣದ ಸೈನ್ಯವನ್ನು ಕ್ರೋಢಿಕರಿಸಿಕೊಂಡು ಸುರಪುರದ ಮೇಲೆ ಹೋರಾಟಕ್ಕಿಳಿಯುತ್ತಾರೆ. ಸುರಪುರದ ಸೈನ್ಯದ ವಿರುದ್ದ ನಡೆದ ಯುದ್ದದಲ್ಲಿ ಅನೇಕ ಬ್ರಿಟಿಷ ಸೈನಿಕರು ಮರಣ ಹೊಂದಿದರು. ನಂತರ ಕ್ಯಾಪ್ಟನ್ ಜಾರ್ಜ ನ್ಯೂಬರಿ ಹೆಚ್ಚು ಸೈನ್ಯದೊಂದಿಗೆ ಸುರಪುರದ ಮೇಲೆ ದಾಳಿ ಮಾಡಿದಾಗ ಸೂಕ್ಷ್ಮವಾಗಿ ಗಮನಿಸಿದ ವೆಂಕಟಪ್ಪ ನಾಯಕ ತನ್ನ ಬೇಡ ಪಡೆಯೊಂದಿಗೆ ವಿರಾವೇಷದಿಂದ ಹೋರಾಡಿ ಕ್ಯಾಪ್ಟನ್ ನ್ಯೂಬರಿಯನ್ನು ಕೊಲೆ ಮಾಡಿ ಕಂಪನಿ ಸೈನ್ಯವನ್ನು ಹಿಮ್ಮೆಟ್ಟಿಸುವಲ್ಲಿ ಯಶಸ್ವಿಯಾದ. ಅವನ ಸಮಾಧಿಯು ಇವತ್ತಿಗೂ ಕೂಡ ರುಕ್ಮಾಪುರದ ಬಳಿಯ ಗುಡ್ಡದ ಮೇಲಿರುವದು ನಮಗೆ ಕಂಡುಬರುತ್ತದೆ. ಇದರಿಂದ ವೆಂಕಟಪ್ಪ ನಾಯಕ ಬ್ರಿಟಿಷರ ಕೆಂಗಣ್ಣಿಗೆ ಗುರಿಯಾದ ವೆಂಕಟಪ್ಪ ನಾಯಕನ ರಣತಂತ್ರ ಮತ್ತು ದಿಟ್ಟ ಹೋರಾಟಕ್ಕೆ ಕಂಪನಿ ಸರ್ಕಾರಕ್ಕೆ ದಿಕ್ಕು ತೋಚದಂತಾಗುತ್ತದೆ. ಹೇಗಾದರೂ ಮಾಡಿ ವೆಂಕಟಪ್ಪ ನಾಯಕನ ಸದ್ದನ್ನಡಗಿಸಲು ಕಂಪನಿ ಸರ್ಕಾರ ಸುರಪುರದ ವೆಂಕಟಪ್ಪ ನಾಯಕನ ಸಂಬಂಧಿ ಹಾಗೂ ಬ್ರಿಟಿಷ ರಹಸ್ಯ ಪ್ರತಿನಿಧಿಯಾಗಿದ್ದ ದೇಶದ್ರೋಹಿ ವಾಗಣಗೇರಿ ಭೀಮರಾಯನನ್ನು ಬಳಸಿಕೊಳ್ಳಲು ಪ್ರಯತ್ನಿಸಿದರು.

ಕ್ಯಾಪ್ಟನ್ ಮಾಲ್‌ಕೋಮ್‌ನ ನೇತೃತ್ವದಲ್ಲಿ ಸುರಪುರ ಸಮೀಪದ ಕವಡಿ ಮಟ್ಟಿಯಲ್ಲಿ ಬ್ರಿಟಿಷರ ಸೈನ್ಯ ಬೀಡಾರ ಹಾಕಿತ್ತು. ಸಿಂಧನೂರಿನ ಬಳಿ ಮತ್ತೊಂದು ದಂಡು ಬಿಡಾರ ಹೂಡಿತ್ತು. 7 ಫೇಬ್ರುವರಿ 1858ರಂದು ಬ್ರಿಟಿಷರ ಸಹಸ್ರಾರು ಸೈನಿಕರು ಸುರಪುರದ ಕೋಟೆಯನ್ನು ಆಕ್ರಮಿಸಲೆತ್ನಿಸಿದಾಗ ವೆಂಕಟಪ್ಪ ನಾಯಕನ ಧೀರ ಸೈನಿಕರು ಕೊಂದು ಹಾಕಿದರು. ಮರುದಿನ ಮದ್ರಾಸ ಪ್ರೆಸಿಡೆನ್ಸಿಯ ಮುಖ್ಯಸ್ಥನಾಗಿದ್ದ ಕಾಲ್‌ಹ್ಯಸನ ನಾಯಕತ್ವದಲ್ಲಿ ಲಿಂಗಸೂರಿನ ಸೈನ್ಯದೊಂದಿಗೆ ಸೇರಿಕೊಂಡು ಸುರಪುರ ಕೋಟೆಯನ್ನು ಆಕ್ರಮಿಸಿದ್ದಾಗಲೂ ವೆಂಕಟಪ್ಪ ನಾಯಕ ಆತನ ಸೈನಿಕರು ವೀರಾವೇಶದಿಂದ ಹೋರಾಡಿ ಬ್ರಿಟಿಷ ಸೈನ್ಯವನ್ನು ಕೊಂದರು.

ಬ್ರಿಟಿಷರ ಸೇನಾಧಿಕಾರಿಯಾಗಿದ್ದ ಕ್ಯಾಪ್ಟನ್ ವಿಂಡಹ್ಯಾಮ್‌ನ ನಾಯಕತ್ವದಲ್ಲಿ ವೆಂಕಟಪ್ಪ ನಾಯಕನ ದಂಗೆಯನ್ನಡಗಿಸಲು ಬ್ರಿಟಿಷರು ಪ್ರಬಲ ಸೈನ್ಯವೊಂದನ್ನು ಕಳುಹಿಸಿದರು. ವೆಂಕಟಪ್ಪ ನಾಯಕನು ಸಹ ಪ್ರಬಲ ಹೋರಾಟ ಮಾಡಿದನು. ಆಗ ಪರಿಸ್ಥಿತಿಯನ್ನರಿತ ವಿಂಡಹ್ಯಾಮ ಅನ್ಯ ಮಾರ್ಗ ಹುಡುಕಲೆತ್ನಿಸಿದನು. ಈ ಕಡೆ ವಾಗಣಗೇರಿಯ ಭೀಮರಾಯ ವೆಂಕಟಪ್ಪ ನಾಯಕನನ್ನು ಕಂಡು ಸುರಪುರದ ಸಂಸ್ಥಾನದ ಮೇಲೆ ದಾಳಿ ಮಾಡಲು ಬ್ರಿಟಿಷರ ಬಲಿಷ್ಟ ಸೈನ್ಯ ಬರುತ್ತದೆ. ಅದನ್ನು ಎದುರಿಸಲು ಸುರಪುರದ ಸೈನ್ಯಕ್ಕೆ ಈಗಿರುವ ಬಲ ಸಾಲದು ಆದ್ದರಿಂದ ನೀವು ಈಗಿಂದಿಗೆ ಹೈದ್ರಾಬಾದಿನ ಸೈನ್ಯ ಸಹಾಯವನ್ನು ಪಡೆದುಕೊಳ್ಳಿ ಎಂದು ಹೇಳಿದ. ರಣರಂಗದ ನಿಜ ಸ್ಥಿತಿಯನ್ನರಿಯದೆ ವೆಂಕಟಪ್ಪ ನಾಯಕ ಕೃಷ್ಣಪ್ಪ ಮತ್ತು ರಾಯಪ್ಪ ಅದರೊಂದಿಗೆ ಹೈದ್ರಾಬಾದಿಗೆ ಹೋದನು. ಹೈದ್ರಾಬಾದ ನಿಜಾಂನ ಪ್ರಧಾನಿಯಾದ ಸಾಲಾರಜಂಗ ಮತ್ತು ವನಪರ್ತಿಯ ರಾಮೇಶ್ವರರಾವ ವೆಂಕಟಪ್ಪ ನಾಯಕನನ್ನು ಬಂಧಿಸಿ ಬ್ರಿಟಿಷ ರೆಸಿಡೆಂಟಗೆ ಒಪ್ಪಿಸುತ್ತಾರೆ. ಇತ್ತ ಕಡೆ ಭೀಮರಾಯ ಸುರಪುರ ಕೋಟೆಯ ಬಾಗಿಲನ್ನು ತೆರೆದು ಅರಮನೆಯನ್ನು ಪ್ರವೇಶಿಸುವಂತೆ ಕ್ಯಾಂಬೆಲ್ ಮತ್ತು ಆತನ ಸೈನ್ಯವನ್ನು ಆಮಂತ್ರಿಸುತ್ತಾನೆ. ಕೊನೆಗೆ ಸುರಪುರ ಸಂಸ್ಥಾನದ ಮೇಲೆ ಕಂಪನಿ ಸರ್ಕಾರ ಜಯ ಸಾಧಿಸುವಲ್ಲಿ ಯಶಸ್ವಿಯಾಯತು.

ಕೊನೆಗೆ ಹೈದ್ರಾಬಾದನಲ್ಲಿ ಸೆರೆಯಾದ ರಾಜಾ ವೆಂಕಟಪ್ಪ ನಾಯಕನನ್ನು ಬ್ರಿಟಿಷರು ಬಂಧಿಸಿ ಸಿಕಂದರಾಬಾದನಲ್ಲಿ ವಿಚಾರಣೆ ನಡೆಸಿ ಮರಣ ದಂಡನೆಗೆ ಗುರಿ ಮಾಡಿದರು. ವಿಷಯವನ್ನರಿತ ಮೆಡೋಸ ಟೇಲರ ವೆಂಕಟಪ್ಪನ ಹಿತೈಷಿಯಾಗಿ, ಕಂಪನಿ ಸರ್ಕಾರದ ಅಧಿಕಾರಿಯಾಗಿ ವೆಂಕಟಪ್ಪನೊಂದಿಗೆ ನಡೆದ ಘಟನೆಗಳ ಕುರಿತು ಚರ್ಚಿಸುತ್ತಾನೆ. ವೆಂಕಟಪ್ಪ ನಾಯಕನ ಕೊನೆಯ ಆಸೆ ಮತ್ತು ನಿರ್ಧಾರಗಳನ್ನು ತಿಳಿದು ಕಂಪನಿ ಸರ್ಕಾರಕ್ಕೆ ಕ್ಷಮೆಯಾಚಿಸುವಂತೆ ಸೂಚಿಸುತ್ತಾನೆ. ಆದರೆ ಇದಕ್ಕೆ ವೆಂಕಟಪ್ಪ ನಾಯಕ ಒಪ್ಪುವದಿಲ್ಲ. “ನನಗೆ ಜೀವದ ಹಂಗಿಲ್ಲ ನನಗೆ ಮರಣ ದಂಡನೆ ವಿಧಿಸಿ, ನನ್ನನ್ನು ಕಳ್ಳನಂತೆ ಗಲ್ಲಿಗೇರಿಸಬೇಕಾಗಿಲ್ಲ ಅದರ ಬದಲಿಗೆ ನನ್ನ ಬಾಯಲ್ಲಿ ತೋಪ ನಿಟ್ಟು ಕೊಲ್ಲಿ ನಾನು ಹೆದರುದಿಲ್ಲ” ಎಂದು ವೀರಾವೇಶದಿಂದ ಹೇಳುತ್ತಾನೆ. ವೆಂಕಟಪ್ಪ ನಾಯಕನಿಗೆ ನಾಲ್ಕು ವರ್ಷ ಸೆರೆಮನೆವಾಸ ಶಿಕ್ಷೆ ನೀಡುತ್ತಾರೆ. ಬ್ರಿಟಿಷ ಲೆಫ್ಟಿನೆಂಟ್ ಪಿಕ್–ಡಾಟ್‌ನ ನೇತೃತ್ವದಲ್ಲಿ ವಿಚಾರಣೆ ಸಂದರ್ಭದಲ್ಲಿ ಮದ್ರಾಸಿನ ಹತ್ತಿರ ಚಂಗಲಪೇಟೆಗೆ ಕರೆದುಕೊಂಡು ಹೋಗುವಾಗ ಅಂಬರ ಪೇಟೆಯಲ್ಲಿ ಮುಂಜಾನೆಯ ಉಪಹಾರಕ್ಕಾಗಿ ಇಳಿದುಕೊಂಡರು. ಆಗ ಲೆಫ್ಟಿನೆಂಟ್ ಪಿಕ್–ಡಾಟ್ ಬಾರು ಮಾಡಿದ ತನ್ನ ರಿವಾಲ್ವರನ್ನು ಡೇರೆಯಲ್ಲಿ ಕುರ್ಚಿಗೆ ತೂಗು ಹಾಕಿ ಮುಖ ಮಾರ್ಜನೆಗಾಗಿ

VOLUME - 6 | ISSUE - 10 | APRIL - 2017

ಹೊರಗೆ ಹೋದಾಗ ಅಷ್ಟರಲ್ಲಿ ಒಳಗಿನಿಂದ ಗುಂಡಿನ ಶಬ್ದ ಕೇಳಿತು ಬಂದು ನೋಡಿದಾಗ ವೆಂಕಟಪ್ಪ ನಾಯಕನು ಗುಂಡು ಹಾರಿಸಿಕೊಂಡು ಮರಣ ಹೊಂದಿದ್ದ. ರಾಜನು ಆತ್ಮ ಹತ್ಯೆ ಮಾಡಿಕೊಂಡನೆಂದು ಸರ್ಕಾರದಿಂದ ನಿರ್ಧರಿಸಲಾಯಿತು.

ಬ್ರಿಟಿಷರು ಸೃಷ್ಟಿಸಿದ ಕತೆಯ ಪ್ರಕಾರ "ವೆಂಕಟಪ್ಪ ನಾಯಕ ವಿದೇಶಿಯರ ಕೈಯಲ್ಲಿ ಸಾಯುವುದಕ್ಕಿಂತ ಆತ್ಮ ಹತ್ಯೆ ಮಾಡಿಕೊಳ್ಳುವುದೇ ಲೇಸೆಂದು ತಿಳಿದು ಗುಂಡು ಹಾರಿಸಿಕೊಂಡು ವೀರ ಮರಣವನ್ನಪ್ಪಿದನು. ಆದರೆ ವೆಂಕಟಪ್ಪ ನಾಯಕರು ಆತ್ಮ ಹತ್ಯೆ ಮಾಡಿಕೊಳ್ಳುವಷ್ಟು ಹೇಡಿಯಾಗಿರಲಿಲ್ಲ. ಏಕೆಂದರೆ ಬಾಲ್ಯದಿಂದ ರಾಷ್ಟ್ರ ಪ್ರೇಮ, ದೇಶಭಕ್ತಿಯನ್ನು ಮೈಗೂಡಿಸಿಕೊಂಡು ಬೆಳೆದ ವೆಂಕಟಪ್ಪ ನಾಯಕನು ಸುರಪುರ ಸಂಸ್ಥಾನದ ರಕ್ಷಣೆಗಾಗಿ ಬ್ರಿಟಿಷರೇ ವಿರುದ್ಧ ವೀರಾವೇಷದಿಂದ ಹೋರಾಟ ಮಾಡಿದ. ಇದು ಬ್ರಿಟಿಷರ ಕುತಂತ್ರದಿಂದ ವೆಂಕಟಪ್ಪ ನಾಯಕನ್ನು ಕೊಲೆ ಮಾಡಿ ಅದನ್ನು ಆತ್ಮ ಹತ್ಯೆ ಎನ್ನುವಂತೆ ಬಿಂಬಿಸುತ್ತಿದೆ. ಆದರೆ ಇತ್ತೀಚಿನ ಸಂಶೋಧನೆಗಳಿಂದ ವೆಂಕಟಪ್ಪ ನಾಯಕನನ್ನು ಮೊಸದಿಂದ ಕೊಲೆ ಮಾಡಿ ದೇಹದ ಕುರುಹುಗಳು ಸಿಗದಂತೆ ಮಾಡಿದ್ದರಲ್ಲದೆ, ಶವ ತಪಾಸಣೆ ಮಾಡಿದ ವರದಿಯು ಕೂಡಾ ಭಾರತೀಯರ ಕೈಗೆ ಸಿಗದ ಹಾಗೆ ನೋಡಿಕೊಂಡಿದ್ದಾರೆ. ಆದರೆ ಎಲ್ಲವನ್ನು ತಿಳಿದುಕೊಂಡ ಮೇಡೋಸ ಟೇಲರ ಈ ವಿಷಯದ ಬಗ್ಗೆ ಹೆಚ್ಚಿನ ಮಾಹಿತಿ ನೀಡದೇ ಇರುವದು ವಿಪರ್ಯಾಸದ ಸಂಗತಿ ಹೀಗೆ ಸಂಸ್ಥಾನದ ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರ ವಿರುದ್ಧ ಹೋರಾಟ ಮಾಡಿದ ರಾಜಾ ವೆಂಕಟಪ್ಪ ನಾಯಕ ಸಾವು ದಾರಣವಾಗಿ ಅಂತ್ಯಗೊಂಡಿತು.

ಈ ರೀತಿಯಾಗಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಆತ್ಮಾರ್ಪಣೆ ಮಾಡಿಕೊಂಡ ವೀರರಲ್ಲಿ ರಾಜಾ ನಾಲ್ವಡಿ ವೆಂಕಟಪ್ಪ ನಾಯಕ ಅಗ್ರ ಗಣ್ಯನಾಗಿದ್ದಾನೆ. ವೆಂಕಟಪ್ಪ ನಾಯಕ ದಿಟ್ಟ ಹೋರಾಟಗಾರನಾಗಿದ್ದು ದಕ್ಷಿಣ ಭಾರತದಲ್ಲಿರುವ ಎಲ್ಲರನ್ನು ಒಂದುಗೂಡಿಸಿ ಬ್ರಿಟಿಷರ ವಿರುದ್ಧ ಸಂಘಟಿಸಿ ಬ್ರಿಟಿಷ ಪ್ರಭುತ್ವವನ್ನು ಅಂತ್ಯಗೊಳಿಸಬೇಕೆಂದು ಛಲ ತೊಟ್ಟ ಮಹಾನ ಶೂರನಾಗಿದ್ದಾನೆ. ಆದರೆ ನಮ್ಮವರು ಮಾಡಿದ ದ್ರೋಹದ ಪರಿಣಾಮವಾಗಿ ಮಹಾನ್ ವೀರನನ್ನು, ಸಂಸ್ಥಾನವನ್ನು ಕಳೆದು ಕೊಂಡಿರುವದು ನಮ್ಮ ದುರ್ದೈವದ ಸಂಗತಿ. ರಾಜಾ ವೆಂಕಟಪ್ಪ ನಾಯಕನ ತ್ಯಾಗ, ಬಲಿದಾನದ ಬಗ್ಗೆ, ಆತನು ಕೈಗೊಂಡ ಸ್ವಾತಂತ್ರ ಹೋರಾಟದ ಹಾದಿ ಎಷ್ಟು ಕಠಿಣವಾಗಿತ್ತು ಎಂಬುವದನ್ನು ಇಂದಿನ ಪೀಳಿಗೆಗೆ ಮನವರಿಕೆ ಮಾಡಿಕೊಡುವದು ತುಂಬಾ ಅವಶ್ಯವಾಗಿದೆ. ಈ ನಿಟ್ಟಿನಲ್ಲಿ ಪ್ರಸ್ತುತ ಪ್ರಭಂದವನ್ನು ಸಾದರಪಡಿಸಲಾಗಿದೆ.

## ಆಕರ ಗ್ರಂಥಗಳು


1. ಭಾಸ್ಕರಾವ ಮುಡಬುಳ, "ಮರೆತುಹೋದ ಸುರಪುರ ಇತಿಹಾಸ", ಎಸ್.ಜಿ ಪ್ರೋಸೆಸ್, ಬೆಂಗಳೂರ, 2001.
2. ಚಿದಾನಂದ ಮೂರ್ತಿ.ಎಮ್, "ಕರ್ನಾಟಕ ಸಂಸ್ಕೃತಿ", ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2001
3. ಹಾಲಪ್ಪಾ ಜಿ.ಎಸ್, "ಉಝಣಠಡಿಥಿ ಠಜ ಈಡಿಜಜಜಠಟ ಒಠತಜಟಜಟಣ ಏಟ ಏಚಿಡಿಟಚಿಣಚಿಞಚಿ" ಭಾಗ–1,2.
4. ಈಶ್ವರಯ್ಯಾ ಮಠ, "ವಚನವಾಹಿನಿ", ತಾಲೂಕ ಕನ್ನಡ ಸಾಹಿತ್ಯ ಪರಿಷತ್ತು, ಸುರಪುರ, 2004.
5. ಕಪಟರಾಳ ಕೃಷ್ಣರಾಯ, "ಸುರಪುರ ಸಂಸ್ಥಾನದ ಇತಿಹಾಸ", ಬೆಂಗಳೂರು, 1977.
6. ಕೃಷ್ಣ ಎ, "ಸಗರನಾಡು ದರ್ಶನ", ಮಹಾ ಕವಿ ಲಕ್ಷ್ಮೀಶ ವಾಚನ ಸಂಘ, ಸುರಪುರ, 1985.
7. ಕೃಷ್ಣ ಎ, "ತವನಿಧಿ", ಸ್ಮರಣ ಸಂಚಿಕೆ, ತಾಲೂಕ ಕನ್ನಡ ಸಾಹಿತ್ಯ, ಸುರಪುರ, 1996.
8. ಕೃಷ್ಣಮಾಚಾರ್ಯ ಬಿ, "ಮರೆಯಲಾಗದ ಸುರಪುರ ರಾಜರ ಚರಿತ್ರೆ", ರಂಜನಾ ಪ್ರಕಾಶ ಚಂದ ಜೈನ, ಸುರಪುರ, 2003.
9. ನಾಗಪ್ಪ ತ್ರಿವೇದಿ, "ವಜ್ರದೀಪ್ತಿ", ಸ್ಮರಣ ಸಂಚಿಕೆ, ಕನ್ನಡ ಸಾಹಿತ್ಯ ಸಂಘ, ರಂಗಂಪೇಟ, 2004.
10. ಪಾಟೀಲ್ ಎಂ.ಬಿ, "ಗುಲಬರ್ಗಾ ಜಿಲ್ಲಾ ಗ್ಯಾಜಿಟಿಯರ್", ಬೆಂಗಳೂರ, 1999.




# Publish Research Article
# International Level Multidisciplinary Research Journal For All Subjects

Dear Sir/Mam,

We invite unpublished Research Paper,Summary of Research Project,Theses,Books and Book Review for publication,you will be pleased to know that our journals are

## Associated and Indexed,India

- ✶ International Scientific Journal Consortium
- ✶ OPEN J-GATE

## Associated and Indexed,USA

- EBSCO
- Index Copernicus
- Publication Index
- Academic Journal Database
- Contemporary Research Index
- Academic Paper Databse
- Digital Journals Database
- Current Index to Scholarly Journals
- Elite Scientific Journal Archive
- Directory Of Academic Resources
- Scholar Journal Index
- Recent Science Index
- Scientific Resources Database
- Directory Of Research Journal Indexing

Golden Research Thoughts
258/34 Raviwar Peth Solapur-413005,Maharashtra
Contact-9595359435
E-Mail-ayisrj@yahoo.in/ayisrj2011@gmail.com
Website : www.aygrt.isrj.org